# ಪರಮಹಂಸರ ಕೃಪಾಧನ ಪಡೆದ ‘ಧನ್‌ಗೋಪಾಲ್’ – ಧನ್ಯಗೋಪಾಲ್

**ಡಾ. ವಿಜಯಭಾರತೀ**

ಖ್ಯಾತ ಫ್ರೆಂಚ್ ಲೇಖಕ ರೋಮಾ ರೋಲಾನಿಗೆ ಶ್ರೀರಾಮಕೃಷ್ಣರನ್ನು ಪರಿಚಯಿಸಿದ ಧನ್‌ಗೋಪಾಲ್ ಮುಖರ್ಜಿಯವರ ಜೀವನವೇ ಒಂದು ವಿಸ್ಮಯ. ಈ ಕುರಿತು ಬರೆದಿರುವ ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಕನ್ನಡ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಮಾಡಿರುವ ಇವರು ಹಲವಾರು ಕನ್ನಡ ಗ್ರಂಥಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿಗಳೂ ಆಗಿರುವ ಅವರು ಸಂಗೀತದಲ್ಲೂ ಪರಿಣತರು. ದೂರದರ್ಶನ, ಯೂಟ್ಯೂಬ್‌ಗಳಲ್ಲಿ ಅವರ ಅನೇಕ ಪ್ರವಚನಗಳು ಬಿತ್ತರಗೊಂಡಿವೆ.



ಪರಮಹಂಸರ ಭಕ್ತರವಲಯದಲ್ಲಿ ಬಹಳ ಜನರಿಗೆ ತಿಳಿಯದ ಪರಮಭಕ್ತ, ಶ್ರೇಷ್ಠ ಸಾಹಿತಿ, ಪ್ರತಿಭಾವಂತ ಕವಿ, ಪ್ರಸಿದ್ಧ ಲೇಖಕ, ಪ್ರಭಾವಶಾಲಿ ವಾಗ್ಮಿ, ಧನ್‌ಗೋಪಾಲ್ ಮುಖರ್ಜಿ. ಅಮೆರಿಕಾದಲ್ಲಿ ಭಾರತದ ಸಂಸ್ಕೃತಿ ಪರಂಪರೆಯ ಹಿರಿಮೆಯನ್ನು ತಮ್ಮ ಬರಹದ ಮೂಲಕ ಹೃದಯಂಗಮವಾಗಿ ನಿರೂಪಿಸಿದ ನಿಜವಾದ ಭಾರತೀಯ. ಅತ್ಯಂತ ಮುಖ್ಯವಾದ ವಿಶೇಷತೆ ಏನೆಂದರೆ ೧೯೨೪ರಲ್ಲಿ, ನೂರು ವರ್ಷಗಳ ಹಿಂದೆ, ಶ್ರೀರಾಮಕೃಷ್ಣ ಪರಮಹಂಸರ ಔನ್ನತ್ಯವನ್ನು ತಮ್ಮ ಕೃತಿಯ ಮೂಲಕ ಆಂಗ್ಲಭಾಷೆಯಲ್ಲಿ ವಿದೇಶೀಯರಿಗೆ ಪರಿಚಯಿಸಿದ ಪ್ರಥಮ ಲೇಖಕ ! ಪರಮಹಂಸರ ನಿರ್ಯಾಣವಾಗಿ ಮೂವತ್ತೈದು ವರ್ಷಗಳಷ್ಟೆ (೩೫) ಆಗಿದ್ದು, ಸ್ವಾಮಿ ವಿವೇಕಾನಂದರು ಬ್ರಹ್ಮೈಕ್ಯರಾಗಿ ಇಪ್ಪತ್ತೆರಡು ವರ್ಷಗಳಷ್ಟೆ ಆಗಿದ್ದ ಸಮಯ. ನೊಬೆಲ್ ಪ್ರಶಸ್ತಿ ಪುರಸ್ಕೃತ ರೋಮಾ ರೋಲಾ ಅವರು ರಚಿಸಿದ ‘ಶ್ರೀರಾಮಕೃಷ್ಣ’ ಎಂಬ ಕೃತಿಗೆ ಅತ್ಯಂತ ವಿಶಿಷ್ಟ ರೀತಿಯಲ್ಲಿ ಪ್ರೇರಣೆ ನೀಡಿದ ಮೌಲ್ಯಯುತವಾದ ಈ ಕೃತಿಯ ನಾಮಾಂಕಿತವೂ ವಿಶಿಷ್ಟವೇ, ‘ಶ್ರೀ ರಾಮಕೃಷ್ಣ ದಿ ಫೇಸ್ ಆಫ್ ಸೈಲೆನ್ಸ್’. ಕೂತಲ್ಲಿ, ನಿಂತಲ್ಲಿ, ಹೋದಲ್ಲಿ, ಬಂದಲ್ಲಿ ಋಷಿವಾಣಿಯನ್ನು ಹರಿಸುತ್ತಿದ್ದ ಸಂವಾದ ಸಿದ್ಧನ ವಾಣಿಯ ಒಳಗೆ ಅಂತರಾರ್ಥದ ಮೌನವಾಣಿಯೊಂದಿದೆ, ಹೊರಗೆ ಕಾಣುವ ಅವರ ದೈವೀ ವ್ಯಕ್ತಿತ್ವದ ಒಳಗೆ ಪರಮಾತ್ಮನೆಡೆಗೆ ಸೆಳೆಯುವ ಅಯಸ್ಕಾಂತ ಶಕ್ತಿಯ ದೀಪ್ತಮೂರ್ತಿಯೊಂದಿದೆ, ಆ ಗುಪ್ತ ಶಕ್ತಿಯೇ ಸಹಸ್ರಾರು ಭಕ್ತರನ್ನು ನಾಲ್ಕೂ ದಿಕ್ಕಿನಿಂದ ಸೆಳೆಯುತ್ತಿದೆ, ಆತ್ಮಸಿದ್ಧಿಯ ಕಡೆಗೆ ಮುನ್ನಡೆಸುತ್ತಿದೆ. ಇದು ಧನ್‌ಗೋಪಾಲ್ ಅವರಿಗಾದ ದಿವ್ಯಾನುಭವ. ಈ ಭಾವವೇ ಕೃತಿರೂಪ ತಾಳಿದೆ.

ಧನ್‌ಗೋಪಾಲ್ ೧೮೯೦ರಲ್ಲಿ ಕಲ್ಕತ್ತೆಯ ಸಮೀಪದ ಒಂದು ಗ್ರಾಮದಲ್ಲಿ ಸಂಪ್ರದಾಯಶೀಲರಾದ ಅರ್ಚಕರ ಮನೆತನದಲ್ಲಿ ಹುಟ್ಟಿದವರು. ಪೂಜಾಕೈಂಕರ್ಯ, ಮಂತ್ರಪಠನದ ಪರಿಸರವಿದ್ದರೂ ಆಧುನಿಕ ವಿದ್ಯಾಭ್ಯಾಸದ ಸೌಲಭ್ಯವಿತ್ತು. ಭಾರತದ ಸ್ವಾತಂತ್ರ್ಯ ಆಂದೋಳನದ ಕ್ರಾಂತಿಕಾರಿ ಪ್ರಭಾವವು ವಿದ್ಯಾರ್ಥಿಯಾಗಿದ್ದ ಧನ್‌ಗೋಪಾಲ್ ಅವರ ಮೇಲೂ ಬೀಸಿತ್ತು, ವಿಷಮ ಪರಿಸ್ಥಿತಿಯ ಹೊಗೆಧಗೆಯ ಪರಿಣಾಮವಾಗಿ ಭಾರತದಿಂದ ತಲೆಮರೆಸಿಕೊಂಡು ದೇಶಾಂತರಕ್ಕೆ ಹೋಗಬೇಕಾದ ಬಿಕ್ಕಟ್ಟಿನ ಪರಿಸ್ಥಿತಿ ಎದುರಾಯಿತು. ಮೊದಲಿಗೆ ಜಪಾನ್‌ನಲ್ಲಿ ನಂತರ ಅಮೆರಿಕಾದಲ್ಲಿ ಸಾಮಾನ್ಯ ದಿನಗೂಲಿ ಕೆಲಸಗಾರನಾಗಿ ಬಹು ಕಠಿಣವಾದ ಕಷ್ಟಕಾರ್ಪಣ್ಯದ ದಿನಗಳನ್ನು ಹದಿಹರೆಯದ ಈ ಯುವಕ ಎದುರಿಸಬೇಕಾಯಿತು, ಅದೂ ಏಕಾಂಗಿಯಾಗಿ! ಆದರೆ ಅವರಲ್ಲಿದ್ದ ಸಹಜಪ್ರತಿಭೆ, ಚಿಂತನಶೀಲತೆ, ಸಾಹಿತ್ಯದ ಅಧ್ಯಯನದ ಒಲವು ಇವರನ್ನು ಶಿಕ್ಷಣಕ್ಷೇತ್ರಕ್ಕೆ ಸೆಳೆಯಿತು. ಆದರೆ ಯಾರ ನೆರವೂ ಇಲ್ಲದೆ, ಆರ್ಥಿಕಾನುಕೂಲ ಏನೇನೂ ಇಲ್ಲದೆ ಅಮೆರಿಕಾದ ಸ್ಟ್ಯಾನ್‌ಫರ್ಡ್ ವಿದ್ಯಾಲಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಗುರಿಮುಟ್ಟಿದ್ದು ಒಂದು ಸಾಹಸ ಕಾರ್ಯವೇ ಆಗಿ, ಸಾಗರದ ಅಲೆಗಳ ಹೊಡೆತದ ನಡುವೆ ಶಕ್ತಿಮೀರಿ ಈಜಿ ದಡ ಸೇರಿದ್ದರು. ಬಾಹ್ಯಜೀವನದ ಹರಿವು ಒಂದು ನಿಲುವಿಗೆ ಬಂದಿದ್ದರೂ ಆಂತರಿಕ ಮೂಕವೇದನೆ ಆರಿರಲಿಲ್ಲ. ಬದುಕಿನ ವಿಪರ್ಯಾಸ, ದುಃಖದೌರ್ಜನ್ಯ, ಪ್ರೀತಿ ಆದರದ ಕೊರತೆ, ಬಗೆಹರಿಯದ ಪ್ರಶ್ನೆಗಳಾಗಿ ಮನದಲ್ಲಿ ಸುಳಿಯುತ್ತಿತ್ತು. ಏನಿದು ಜೀವನ,

ಏತಕ್ಕೀ ಜೀವನ, ಈ ಜೀವಕ್ಕೆ ಈ ತೊಡಕುತಡೆಗಳಿಂದ ಬಿಡುಗಡೆ ಹೇಗೆ? ಕಾಯುವ ಕೈಹಿಡಿದು ನಡೆಸುವ ದೈವ ಒಂದಿದೆಯೆ? ಇದ್ದರೆ ಕಾಣುವುದು ಹೇಗೆ? ತಂಪು ನೀಡುವ ತಂಬೆಳಕು ಒಂದಿದೆಯೆ? ಈ ಎಲ್ಲ ತುಡಿತಗಳಲ್ಲಿ ಇದ್ದಾಗ ಶ್ರೀ ಶಂಕರಾಚಾರ್ಯರ ಬ್ರಹ್ಮಸೂತ್ರ ಭಾಷ್ಯ ಅವರಿಗೆ ಹೊಂಬೆಳಗಿನ ಕಿರಣವಾಗಿ ಹೊಳೆಯಿತು. ಶಂಕರರ ಬೋಧೆಯ ಬೆಳಕಿನಲ್ಲಿ ಬದುಕಿಗೊಂದು ಅರ್ಥ ಹೊಳೆಯಿತು. ಇದೇ ಸುಸಂದರ್ಭದಲ್ಲಿ ಅವರಿಗೆ ಸ್ವಾಮಿ ವಿವೇಕಾನಂದರ ಹಿರಿಯ ಭಕ್ತರೂ ಆಪ್ತ ಸ್ನೇಹಿತರೂ ಆಗಿದ್ದ ಮೇರಿ ಮ್ಯಾಕ್ಲಿಯಾಡ್ ಅವರ ಪರಿಚಯದ ಪುಣ್ಯಾವಕಾಶ ಪ್ರಾಪ್ತವಾಯಿತು. ಸ್ವಾಮೀಜಿಯವರ ಹಿರಿಮೆ ಅವರಿಂದ ಅರಿವಾಗಿ, ಶ್ರೀಶಂಕರನನ್ನೇ ಅವರಲ್ಲಿ ಕಂಡರು, ಮನಸೋತರು. ಆಂತರ್ಯ ದಲ್ಲಿ ಆನಂದದ ಸೆಲೆ ತುಂಬಿಬಂತು.

೧೯೩೨ರಲ್ಲಿ ಮಿಸ್ ಮ್ಯಾಕ್ಲಿಯಾಡ್ ಧನ್‌ಗೋಪಾಲ್ ಅವರನ್ನು ಭಾರತಕ್ಕೆ ಕರೆತಂದು, ಬೇಲೂರು ಮಠದ ಪವಿತ್ರ ಸನ್ನಿಧಿಯಲ್ಲಿ ಸ್ವಾಮಿ ಶಿವಾನಂದರ ದರ್ಶನ ಪಡೆಯುವ ಅವಕಾಶ ಒದಗಿ ಬಂತು. ಅದ್ವೈತ ದರ್ಶನದ ಈ ವಿನೂತನ ಪರಿಸರದಲ್ಲಿ ಧನ್‌ಗೋಪಾಲ್ 'ಧನ್ಯಗೋಪಾಲ್' ಆಗಿ ಪರಿವರ್ತಿತರಾದರು. ಅವರ ಅಂತರಾತ್ಮ ತನ್ನ ನಿಜದ ನೆಲೆಯನ್ನು, ನಿಜಸ್ವರೂಪವನ್ನು, ನಿಜಬಾಂಧವ್ಯವನ್ನು ಪರಮಹಂಸರ ಆ ಮಹಾಸನ್ನಿಧಿಯಲ್ಲಿ ಕಂಡುಕೊಂಡಿತು.

ಸ್ವಾಮಿ ವಿವೇಕಾನಂದರ ಜ್ಞಾನದೀಪ್ತವಾದ ಮಹಾತ್ಯಾಗದ ಆಹ್ವಾನಕ್ಕೆ ಓಗೊಟ್ಟು ಸರ್ವಸಂಗ ಪರಿತ್ಯಾಗಿಗಳಾಗಿ ಸಮರ್ಪಣ ಭಾವದಿಂದ ಅಲ್ಲಿ ಸೇವೆ ಸಲ್ಲಿಸುತ್ತಿದ್ದ ಯುವ ಸಂನ್ಯಾಸಿಗಳ, ಬ್ರಹ್ಮಚಾರಿಗಳ ಪ್ರಸನ್ನ, ಪ್ರಶಾಂತ ಮನೋಭಾವದ ನಡೆನುಡಿ ಅವರ ಮನಸ್ಸನ್ನು ಬಹುವಾಗಿ ಸೆಳೆದಿತ್ತು. ಸ್ವಾಮಿ ಅಖಂಡಾನಂದರ, ಸ್ವಾಮಿ ತುರೀಯಾನಂದರ ನಿಸ್ವಾರ್ಥ, ನಿರ್ಮಲ ಪ್ರೇಮ ಅವರ ಪಾಲಿಗೆ ಅಮೃತಸಿಂಚನವೇ ಆಯಿತು. ತಮ್ಮ ಸ್ವದೇಶದಿಂದ ಕಿರಿಯವಯಸ್ಸಿನಲ್ಲಿಯೇ ಬೇರ್ಪಟ್ಟು ಕಂಡುಕೇಳಿಲ್ಲದ ಪರದೇಶದಲ್ಲಿ ಬೇಗುದಿಯ ಜೀವನಕ್ಕೆ ಒಳಗಾಗಿ, ಇಂತಹ ಒಂದು ದೈವಿಕ ತಪೋಧಾಮಕ್ಕಾಗಿ ಹಂಬಲಿಸಿದ್ದ ಧನ್‌ಗೋಪಾಲ್ ಅವರಿಗೆ ಇದೇ ಸರ್ವಸ್ವವಾಯಿತು. ಸ್ವಾಮಿ ಶಿವಾನಂದರಿಂದ ಮಂತ್ರದೀಕ್ಷೆ ಪಡೆದ ಮೇಲೆ ಪರಮ ಗುರುವಿನ ಪುಣ್ಯಕ್ಷೇತ್ರವೂ ಆಯಿತು.

ಆದರೆ ಬಹಳ ವರ್ಷಗಳ ನಂತರ ಭಾರತಕ್ಕೆ ಬಂದಿದ್ದರು. ಅಮೆರಿಕಾ ಮಹಿಳೆಯನ್ನೇ ವಿವಾಹವಾಗಿದ್ದರು. ಮಡಿವಂತ ಸಂಪ್ರದಾಯ ಕುಟುಂಬ ಅವರನ್ನು ಆದರಿಸಲಿಲ್ಲ. ದೂರವೇ ಇರಿಸಿತು. ಒಡಹುಟ್ಟಿದ ಅಣ್ಣ ಮಾತ್ರ ಇವರೊಂದಿಗೆ ಮೊದಲಿನ ಪ್ರೀತಿವಾತ್ಸಲ್ಯದಿಂದಲೇ ನಡೆದುಕೊಂಡರು. ಕುಟುಂಬವರ್ಗ, ಪರಿಚಿತರು, ಬಂಧು-ಬಾಂಧವರು ಅವರನ್ನು ಅಪರಿಚಿತರಂತೆ ಕಂಡಿದ್ದರು. ಭಾವಜೀವಿಯೂ ಸೂಕ್ಷ್ಮಮನೋಭಾವದವರೂ ಆಗಿದ್ದ ಧನ್‌ಗೋಪಾಲ್ ತುಂಬಾ ನೊಂದು ನಿರಾಶೆಗೊಂಡರು. ಸ್ವದೇಶದಲ್ಲಿ ಪರದೇಶಿಯಾಗಿ, ವಿದೇಶದಲ್ಲಿ ಅನ್ಯದೇಶಿಯನಾಗಿ ಮಧ್ಯಂತರ ಸ್ಥಿತಿಯಲ್ಲಿ ಅವರು ನಲುಗಿದರು. ನೊಂದ ಈ ಮನೋಭಾವವೇ ಕೃತಿಯಾಗಿ ಮೂಡಿಬಂದಿತು. 'ಕ್ಯಾಸ್ಟ್ ಅಂಡ್ ಔಟ್‌ಕ್ಯಾಸ್ಟ್', 'ಎ ಸನ್ ಆಫ್ ಮದರ್ ಇಂಡಿಯಾ ಸ್ಪೀಕ್ಸ್?', 'ಮೈ ಬ್ರದರ್ಸ್ ಫೇಸ್' ಈ ಮೂರೂ ಪುಸ್ತಕಗಳು ಹೃದಯ ಸ್ಪರ್ಶಿಯಾಗಿ ಓದುಗರ ಭಾವತಂತುಗಳನ್ನು ಮೀಟಿವೆ.

ಪ್ರಸಿದ್ಧ ಸಾಹಿತಿಯಾಗಿ, ಅವರ ಚಿಂತನಶೀಲ ವಿಚಾರಾತ್ಮಕ ಲೇಖನಗಳು, ಭಗವದ್ಗೀತೆ ಮತ್ತು ಉಪನಿಷತ್ತಿನ ಋಷಿ ವಾಣಿಯ ಮಹತ್ತನ್ನು ತಮ್ಮ ಮೇಲೆ ಪ್ರಭಾವ ಬೀರಿದ ಮುಖ್ಯ ಭಾಗಗಳನ್ನು ಕುರಿತು ಇಂಗ್ಲಿಷಿನಲ್ಲಿ ಅವರು ಬರೆದಿರುವ ಬರಹ ಮೌಲ್ಯಯುತವಾದವು. ಆಲ್ಬರ್ಟ್ ಐನ್‌ಸ್ಟೈನ್, ಬರ್ನಾಡ್ ಷಾ, ಬರ್ಟ್ರಂಡ್ ರಸೆಲ್, ಪಂಡಿತ್ ಜವಹರಲಾಲ್ ನೆಹರು ಮುಂತಾದ ಮಹನೀಯರೆಲ್ಲ ಇವರ ಸಾಹಿತ್ಯ ಶೈಲಿಗೆ, ವಿಚಾರ ಸಂಪನ್ನತೆಗೆ ಇವರ ಕೃತಿಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಅವರೆಲ್ಲರ ನಿಕಟಸಂಪರ್ಕವೂ ಇತ್ತು. ಈ ಎಲ್ಲ ಗಣ್ಯವ್ಯಕ್ತಿಗಳ ಆದರದ ಜೊತೆಗೆ ಬೇಲೂರು ಮಠದ ಯತಿಶ್ರೇಷ್ಠರ ಸಂಪರ್ಕ ಸಂಪನ್ನತೆ ಇವರ ಸಾಹಿತ್ಯಸೇವೆಗೆ, ಭಾಷಣಗಳ ಕಾರ್ಯಕ್ಕೆ ವಿಶಿಷ್ಟ ರೀತಿಯ ಆಧ್ಯಾತ್ಮಿಕ ಸ್ವರೂಪವನ್ನೂ ನೀಡಿತು. ಇದುವರೆಗೆ ಧನ್‌ಗೋಪಾಲ್ ಅವರ ಆಂತರ್ಯದಲ್ಲಿ ಗುಪ್ತವಾಗಿದ್ದ ನಿಷ್ಠಾವಂತ ಶ್ರೇಷ್ಠ ಭಕ್ತನೊಬ್ಬ ಎಚ್ಚರಗೊಂಡಿದ್ದ, ಮುಂದಿನ ತನ್ನೆಲ್ಲ ಜೀವನವನ್ನೂ ಪರಮಹಂಸರ ಸೇವೆಗೆಂದೇ ಮೀಸಲಾಗಿಡುವ ಸಂಕಲ್ಪ ಕೈಗೊಂಡಿದ್ದ. ಈ ಮಹಾ ಸಂಕಲ್ಪದ ಫಲವಾಗಿಯೇ ಮೂಡಿ ಬಂದ ಕೃತಿ, 'ಶ್ರೀರಾಮಕೃಷ್ಣ ದಿ ಫೇಸ್ ಆಫ್ ಸೈಲೆನ್ಸ್'.

ಇದು ಒಂದು ಅತ್ಯಂತ ಅಪರೂಪವಾದ ಕೃತಿ, ಹಲವಾರು ರೀತಿಗಳಿಂದ. ನಲವತ್ತು ವರ್ಷಗಳ ಹಿಂದೆಯೇ ಮುಗಿದು ಹೋಗಿದ್ದ ಪವಿತ್ರ ದಿನಗಳನ್ನು ಅದೇ ಪರಿಸರದಲ್ಲಿ, ಅವರನ್ನು ಕಂಡವರೊಂದಿಗೆ, ಅವರ ದಿವ್ಯ ಸಾನ್ನಿಧ್ಯವನ್ನು ಪಡೆದಿದ್ದವರೊಂದಿಗೆ, ಅವರ ಋಷಿವಾಣಿಯನ್ನು ಕೇಳಿದ್ದವರೊಂದಿಗೆ ಅವರ ಉನ್ನತ ವ್ಯಕ್ತಿತ್ವದಲ್ಲಿ ದಿವ್ಯಜ್ಞಾನದ ಹೊಳಹು ಕಂಡವರೊಂದಿಗೆ, ಅವರ ಅನುಭವವನ್ನೆಲ್ಲ ಕೇಳಿ, ನಿಜಸಂಗತಿಯನ್ನು ಸಹಜ, ಸರಳ ಭಾವಸಮನ್ವಿತ ಕಥನಶೈಲಿಯಲ್ಲಿ ನಿರೂಪಿಸಬೇಕೆಂಬುದೇ ಅವರ ಉತ್ಕಟ ಅಪೇಕ್ಷೆಯಾಗಿತ್ತು. ಅದಕ್ಕಾಗಿ ಎಷ್ಟೋ ತಿಂಗಳು, ಎಲ್ಲೆಲ್ಲಿದ್ದರೆ ಅಲ್ಲಲ್ಲಿ ಹೋಗಿ, ದಕ್ಷಿಣೇಶ್ವರದ ಗಂಗೆಯ ಮಡಿಲಲ್ಲಿ ಪುಣ್ಯದ ಆ ದಿನಗಳನ್ನೆಲ್ಲ ಮತ್ತೆ ಪರಿಭಾವಿಸಿ ಕೃತಿ ರಚಿಸಲು ನಿರ್ಧರಿಸಿದರು.

ನೂರೈವತ್ತು ಪುಟಗಳ ಹರಹಿನಲ್ಲಿ ಹದಿನಾರು ಅಧ್ಯಾಯವನ್ನೊಳಗೊಂಡ ಈ ಕೃತಿ, ಓದುಗರಿಗೆ ಶ್ರದ್ಧಾವಂತ ಯಾತ್ರಿಕನೊಂದಿಗೆ ನಡೆಸಿದ ತೀರ್ಥಯಾತ್ರೆಯೇ! ಭಾವನಾತ್ಮಕ ಕಥನ

ಶೈಲಿ, ನಿಜಸಂಗತಿಯೇ ಆಧಾರವಾದ ಸತ್ವಪೂರ್ಣ ಸತ್ಯಚಿಂತನೆ, ಭೂತಕಾಲವನ್ನೇ ವರ್ತಮಾನವಾಗಿಸುವ ಸಹಜ ನಿರೂಪಣೆ, ಬರವಣಿಗೆಯ ಸಾಲುಸಾಲಿನಲ್ಲಿ ಗುಪ್ತವಾಗಿ ಹರಿಯುವ ಗುರು ಭಕ್ತಿ – ಇವು ಓದುಗರನ್ನು ವಿನೂತನ ರೀತಿಯ ರಸಧಾಮಕ್ಕೆ ಕರೆದೊಯ್ಯುತ್ತದೆ.

ಗಂಗಾನದಿಯ ತೀರದ ಸೋಪಾನಗಳ ಮೇಲೆ ನಿಂತು ಸೂರ್ಯಾಸ್ತದ ವರ್ಣರಂಜಿತ ಪ್ರಕಾಶದಲ್ಲಿ, ಪುಷ್ಪೋದ್ಯಾನದ ಬೇಲೂರು ಮಠದ ಶ್ವೇತಶಿಖರ, ಸಾಯಂಸಂಧ್ಯಾಪೂಜಾರತಿ-ಶಂಖನಿನಾದ, ಭಜನೆಯ ಮಂಜುಳಗಾನ, ಧನ್ ಗೋಪಾಲ್ ಅವರನ್ನು ಬೇರೊಂದು ಋಷಿಧಾಮಕ್ಕೆ ಕರೆದೊಯ್ದಿತು. ಗರ್ಭ ಮಂದಿರದಲ್ಲಿ ಪಂಚಾರತಿಯ ಬೆಳಕಿನಲ್ಲಿ ಶ್ರೀರಾಮಕೃಷ್ಣರ ಚಿತ್ರ ತೇಜೋಮಯವಾಗಿ ಜೀವಂತವಾಗಿ ಕಂಡಿತು. ಅಂತರಾತ್ಮದ ಆಪ್ತಬಂಧುವನ್ನು ಬಹುಕಾಲದ ನಂತರ ಕಣ್ತುಂಬ ಕಂಡಂತೆ ಶರೀರವೆಲ್ಲ ರೋಮಾಂಚನಗೊಂಡಿತು. ಮನಸ್ಸು ಮೌನದಿಂದ ಸ್ತಬ್ಧವಾಯಿತು. ಇದು ಧನ್‌ಗೋಪಾಲ್ ಅವರಿಗೆ ಗುರುಸನ್ನಿಧಿಯಲ್ಲಿ ಆದ ಪ್ರಪ್ರಥಮ ಅನುಭವ. ಅಲ್ಲಿನ ಕಾರ್ಯಕಲಾಪಗಳಲ್ಲಿ ಓಡಾಡುತ್ತಿದ್ದ ಯುವಯತಿಗಳ ಮತ್ತು ಬ್ರಹ್ಮಚಾರಿಗಳ ಪ್ರಸನ್ನ, ಪ್ರಶಾಂತ ಪವಿತ್ರ ವರ್ಚಸ್ಸು ಅವರನ್ನು ಬಹುವಾಗಿ ಸೆಳೆಯಿತು. ಮಾನವ ಸ್ವರೂಪದಲ್ಲಿ ಇಂತಹ ಯೌಗಿಕ ದೈವೀ ಸ್ವರೂಪ ಅರಳಿರುವುದು ಹೇಗೆ?! ಪ್ರಶ್ನೆ – ಆಶ್ಚರ್ಯ ಅವರ ಮನಸ್ಸನ್ನಾವರಿಸಿತು.

ಗಾಢ ಪರಿಣಾಮದ ಎರಡನೇ ಪ್ರಸಂಗ ಒದಗಿ ಬಂದಿದ್ದು ಮಹಾನ್ ಭಕ್ತ ಮಹೇಂದ್ರನಾಥ ಗುಪ್ತರ ಸಂದರ್ಶನದ ಸಮಯದಲ್ಲಿ. ಅವರು ವಾಸಿಸುತ್ತಿದ್ದ ಸ್ಥಳಕ್ಕೆ ಹೋಗಿ ಅವರನ್ನು ಕಂಡಾಗ, ಎತ್ತರದ ನಿಲುವಿನ, ನೀಳವಾದ ಬಿಳಿ ಗಡ್ಡದ, ಹೊಳೆವ ಕಣ್ಣಿನ ಶಾಂತ ಮುಖಮುದ್ರೆಯ ಪುಣ್ಯವ್ಯಕ್ತಿ, ಧನ್‌ಗೋಪಾಲ್ ಅವರಿಗೆ ಸನಾತನ ಭಾರತ ಪರಂಪರೆಯ ಮಹಾನ್ ಋಷಿಯಾಗಿಯೇ ಕಂಡರು. ಅವರ ಭಾವದೀಪ್ತವಾದ ಗಂಭೀರವಾಣಿಯಲ್ಲಿ ಪರಮಹಂಸ ಸಾನ್ನಿಧ್ಯಾನುಭವದ ವಿದ್ಯುತ್‌ಸ್ಪರ್ಶವಾಗಿ, ಕೇಳುತ್ತಿದ್ದ ಅವರಲ್ಲೂ ಸಂಚಲನಗೊಂಡಿತು. ''ಪರಮಹಂಸರ ಬಾಯಿಂದ ಬಂದ ಮಾತುಗಳಲ್ಲಿ ಹೊಳೆವ ನಕ್ಷತ್ರಗಳಂತೆ, ನನಗೆ ಸಾಧ್ಯವಾದಷ್ಟು 'ಕಥಾಮೃತ'ದಲ್ಲಿ ಸಂಗ್ರಹಿಸಿದ್ದೇನೆ. ಅವರ ನಿಕಟ ಭಕ್ತರು ಇನ್ನೂ ಕೆಲವರಿದ್ದಾರೆ, ಕೊಳಲಿನ ಮಧುರ ನಾದದಂತೆ ಗುರುವಿನ, ಪುಣ್ಯಸ್ಮೃತಿ ಅವರಿಂದ ಹರಿಯುತ್ತದೆ, ಅವನ್ನೆಲ್ಲ ಕೇಳಿ ನಿಮ್ಮ ಕೃತಿಯಲ್ಲಿ ಮೂಡಿಸಿ. ಇಂತಹ ಪುಣ್ಯ ಕಾರ್ಯದಲ್ಲಿ ನಮ್ಮ ಪ್ರಯತ್ನಕ್ಕಿಂತ ಹೆಚ್ಚಾಗಿ ಗುರುಕೃಪೆಯೇ ಸರ್ವಸ್ವವಾಗಿ ನಿಮ್ಮನ್ನು ಮುನ್ನಡೆಸುತ್ತದೆ.'' ಮಾಸ್ಟರ್ ಮಹಾಶಯರ ಕಣ್ಣಿನಿಂದ ಆನಂದಬಾಷ್ಪ ಉದುರಿ ಅವರು ಭಾವ ಪರವಶರಾದುದನ್ನು ಕಂಡು ಧನ್‌ಗೋಪಾಲ್ ಮೂಕರಾದರು, ಸಾಷ್ಟಾಂಗ ನಮಸ್ಕಾರ ಸಲ್ಲಿಸಿದರು.

ಮಾಹಿತಿ ಸಂಗ್ರಹದ ಈ ತೀರ್ಥಯಾತ್ರೆಯಲ್ಲಿ ಧನ್ ಗೋಪಾಲ್ ಅವರಿಗೆ ಎದುರಾದ ಅತ್ಯಂತ ಆಶ್ಚರ್ಯದ ಅನಿರೀಕ್ಷಿತ ಪ್ರಸಂಗ, ಅವರ ಬಾಲ್ಯಸ್ನೇಹಿತನನ್ನು ಬೇಲೂರು ಮಠದ ಒಬ್ಬ ಯುವಯತಿಯನ್ನಾಗಿ ಕಂಡಿದ್ದು. ಸ್ನೇಹಿತನ ಈ ಪರಿವರ್ತನೆ ಅವರನ್ನು ಸ್ತಬ್ಧಗೊಳಿಸಿತು. ಅವನ ಸಾಧನಾನುಭವ, ಹಿರಿಯ ಯತಿಗಳ ಮಾರ್ಗದರ್ಶನ, ಧ್ಯಾನಸಿದ್ಧಿ, ಪರಮಹಂಸರ ಕೃಪಾವರ್ಷ ಇವೆಲ್ಲದರ ಸಂವಾದ ಅವರಿಗೆ ಬೇರೊಂದು ಲೋಕದ ದ್ವಾರವನ್ನೇ ತೆರೆದಿಟ್ಟಂತಾಯಿತು.

ಮೂರನೆಯ ಮಹತ್ತರ ತಿರುವಿನ ಪ್ರಸಂಗ ಸ್ವಾಮಿ ತುರೀಯಾನಂದ ಮತ್ತು ಅಖಂಡಾನಂದರೊಂದಿಗೆ ಆದ ಮಹತ್ವಪೂರ್ಣ ಸಂವಾದ. ಪರಮಹಂಸರ ಸಾಧನೆ, ಬೋಧನೆ ಮಾನವರ ಉದ್ಧಾರದ ಹಂಬಲ ಇವೆಲ್ಲದರ ವಿವರಣೆ, ವಿವೇಚನೆ, ವಿಶ್ಲೇಷಣೆ ಮುಖ್ಯವಾದ ವಿಚಾರದ ಹರಿವಾಗಿ ಸಂವಾದ ನಡೆಯುತ್ತದೆ. ಸಾಕಾರ, ನಿರಾಕಾರ ದ್ವೈತ, ಅದ್ವೈತ, ಈ ಎಲ್ಲ ತತ್ತ್ವದರ್ಶನದ ಅನುಭವ ಸಮನ್ವಿತ ನಿರೂಪಣೆ, ಅವರ ಗುರುಭಕ್ತಿ, ಸಮರ್ಪಣಾಭಾವ, ನಿಃಸ್ವಾರ್ಥಪ್ರೇಮ ನಿಜವಾದ ದೈವಿಕ ವಾತಾವರಣಕ್ಕಾಗಿ ಹಂಬಲಿಸಿದ್ದ ಧನ್‌ಗೋಪಾಲ್ ಅವರಿಗೆ ತಂಬೆಳಕನ್ನೂ, ತಂಗಾಳಿಯ ತಂಪನ್ನೂ ನೀಡುತ್ತದೆ. ಭಾಗವತೋತ್ತಮರಾದ ವೃದ್ಧ ಭಕ್ತರಿಂದ ಪರಾಭಕ್ತಿಯ ಮಹತ್ತು ತಿಳಿಯುತ್ತದೆ.

ನಾಲ್ಕನೆಯ ಮಹತ್ತರ ತಿರುವಿನ ಪ್ರಸಂಗ ದಕ್ಷಿಣೇಶ್ವರದಲ್ಲಿ. ಪರಮಹಂಸರ ನಿಕಟವರ್ತಿಯಾಗಿದ್ದ ವೃದ್ಧ ಭಕ್ತೆಯೊಬ್ಬರನ್ನು ಸಂದರ್ಶಿಸಿದಾಗ. ದಕ್ಷಿಣೇಶ್ವರದ ಆಗಿನ ಸ್ಥಿತಿ-ಗತಿ ಸಾಕಷ್ಟು ಶಿಥಿಲವಾಗಿತ್ತು. ಪಂಚವಟಿಯ ಒಪ್ಪ-ಓರಣವೆಲ್ಲ ಕುಂದಿತ್ತು, ನಡೆವ ದಾರಿಯೇ ತೊಡಕಾಗಿ ಉದುರಿದ ಎಲೆ ಕಡ್ಡಿಕಸದಿಂದ ತುಂಬಿತ್ತು. ಭಕ್ತೆಯನ್ನು ಅವರು ಪ್ರಶ್ನಿಸಿದರು, ''ಅಂತಹ ಮಹಾಚೇತನರಿದ್ದ ಈ ಭವ್ಯ ತಪೋಕ್ಷೇತ್ರ ಹೀಗೇಕೆ ಆಗಿದೆ?'' ಎಂದು ಕಂಬನಿ ಹರಿಸಿದರು. ಆ ಮಹಿಳೆ ಉತ್ತರಿಸಿದರು : ''ಆ ಯೋಗ ವೈಭವವೆಲ್ಲ ಇಲ್ಲಿಂದ ಗಂಗೆಯ ಆ ತೀರದ ಬೇಲೂರು ಮಠಕ್ಕೆ ಸ್ಥಳಾಂತರಗೊಂಡಿದೆ. ಕೀರ್ತಿವೈಭವಕ್ಕಾಗಿ ಪರಮಹಂಸರು ಅವತರಿಸಲಿಲ್ಲ, ನಿಜ ಭಕ್ತರ ಉದ್ಧಾರ ಒಂದೇ ಅವರ ಉದ್ದೇಶ. ಅದು ಸದ್ದಿಲ್ಲದೆ ನಡೆಯುತ್ತಿದೆ. ಈ ಕ್ಷೇತ್ರದ ಮುಂದಿನ ಭವಿಷ್ಯ ಭವತಾರಿಣಿಗೇ ಸೇರಿದ್ದು. ಪರಮಹಂಸರು ಮನಸ್ಸು ಮಾಡಿದ್ದರೆ, ಅವರು ದಕ್ಷಿಣೇಶ್ವರದ ಅರ್ಚಕ ಸಾಮ್ರಾಟರಾಗಿ ವಜ್ರ ವೈಡೂರ್ಯ ಪೀತಾಂಬರ ಧರಿಸಿ, ಮೇನೆಯಲ್ಲಿ ಓಡಾಡಬಹುದಿತ್ತು. ಆದರೆ ಅವರ ಯೋಗವೈಭವ ಬೇರೆ, ಅದು ಇಂದಿಗೂ ಈ ಕ್ಷಣಕ್ಕೂ ನಡೆಯುತ್ತಿದೆ, ಮುಂದೆಯೂ ನಡೆಯುತ್ತದೆ. ಗಂಗಾಮಾತೆಯ ಸಲಿಲತರಂಗವನ್ನು ಆಲಿಸಿ ನಿಮ್ಮ ಅಂತರ್ಯವನ್ನು ಶ್ರುತಿಮಾಡಿಕೊಳ್ಳಿ. ಗುರುಕೃಪೆ ನಿಮ್ಮನ್ನು ಮುನ್ನಡೆಸಲಿ'' ಎಂದು ಆಶೀರ್ವದಿಸಿದಾಗ ಧನ್‌ಗೋಪಾಲ್, ಅವರ ಮಾತೃ ವಾತ್ಸಲ್ಯಕ್ಕೆ ವಂದಿಸಿದರು.

ಪರಮಹಂಸರ ಜೀವನದ ಎಲ್ಲ ಆಯಾಮಗಳನ್ನು ಅವರ ದಿವ್ಯ ವ್ಯಕ್ತಿತ್ವದ ರೂಪು–ರೇಖೆಗಳನ್ನು, ಅಪರೂಪದ ಪ್ರಸಂಗಗಳನ್ನು ಅವರ ಬೋಧೆಯ ಸಹಜ, ಸರಳ, ತಿಳಿಬೆಳಕನ್ನು ಅತ್ಯಂತ ಶ್ರಮವಹಿಸಿ ನಿಜಭಕ್ತರಿಂದ ನಿಜಸಂಗತಿಗಳನ್ನೆಲ್ಲ ಸಂಗ್ರಹಿಸಿ, ಮತ್ತೆ ಮಹೇಂದ್ರನಾಥರಲ್ಲಿಗೆ ಬಂದು 'ಈ ವಿಷಯವನ್ನೆಲ್ಲ ನಿಷ್ಠೆಯಿಂದ ಹೃದಯಂಗಮವಾಗಿ ನನ್ನ ಕೃತಿಯಲ್ಲಿ ಮೂಡಿಬರುವಂತೆ ಆಶೀರ್ವದಿಸಿ' ಎಂದು ಬೇಡಿ ನಮಸ್ಕರಿಸಿ, ಹೃತ್ಪೂರ್ವಕ ಆಶೀರ್ವಾದವನ್ನು ಪಡೆದು ಅಮೆರಿಕಾಗೆ ಹಿಂದಿರುಗಿದರು. ಇದು ಧನ್‌ಗೋಪಾಲ್ ಅವರ ಕೃತಿರಚನೆಯ ತೀರ್ಥಯಾತ್ರೆ !

ಶ್ರೀರಾಮಕೃಷ್ಣರ ಜೀವನದ ಮಹತ್ವ , ಬೋಧನೆಯ ಔನ್ನತ್ಯವನ್ನು ಆಂಗ್ಲಭಾಷೆಯಲ್ಲಿ ಕೃತಿರೂಪದಲ್ಲಿ ತಂದ ಈ ಪುಟ್ಟಪುಸ್ತಕ ಬಹುದೊಡ್ಡ ಪಾತ್ರವನ್ನೇ ನಿರ್ವಹಿಸಿತು. ಅದಕ್ಕಾಗಿ ಒದಗಿ ಬಂದ ಪ್ರಸಂಗವೂ ಪ್ರಮುಖವಾದ ತಿರುವು ಎಂದೇ ಹೇಳಬಹುದು. ಫ್ರೆಂಚ್ ಸಾಹಿತ್ಯದ ಪ್ರಸಿದ್ಧ ಕವಿ, ಸಾಹಿತಿ, ನೊಬೆಲ್ ಪ್ರಶಸ್ತಿ ಪುರಸ್ಕೃತ ರೋಮಾ ರೋಲಾ ಅವರು ಮೊದಲನೇ ಮಹಾಯುದ್ಧವನ್ನು ವಿರೋಧಿಸಿ ಬರೆದ ಅವರ ಲೇಖನಗಳಿಗಾಗಿ ಫ್ರಾನ್ಸ್‌ನಿಂದ ಬಹಿಷ್ಕೃತರಾದರು. ಆಡಳಿತ ವರ್ಗದ ಈ ನಿರ್ಧಾರದಿಂದ ಅವರು ತುಂಬಾ ಮನನೊಂದಿದ್ದರು. ನೆಮ್ಮದಿಗಾಗಿ ಅವರ ಸೋದರಿಯ ಮನೆಯಲ್ಲಿ ಜಿನಿವಾ ಪಟ್ಟಣದಲ್ಲಿದ್ದಾಗ ಫ್ರೆಂಚ್ ಭಾಷೆಗೆ ಆಗತಾನೇ ಅನುವಾದವಾಗಿದ್ದ ಈ ಪುಸ್ತಕ 'ಫೇಸ್ ಆಫ್ ಸೈಲೆನ್ಸ್' ಅವರ ಕೈ ಸೇರಿತು. ವಿಶ್ವಮಾನವತೆ, ವಿಶ್ವಧರ್ಮ, ವಿಶ್ವಮೈತ್ರಿ, ವಿಶ್ವಶಾಂತಿಯ ತುಡಿತದಲ್ಲಿದ್ದ ರೋಮಾ ರೋಲಾ ತಂಬೆಳಕಿನ ಪೂರ್ಣ ಚಂದ್ರೋದಯವನ್ನೇ ಶ್ರೀರಾಮಕೃಷ್ಣರ ಭೂಮ ವ್ಯಕ್ತಿತ್ವದಲ್ಲಿ ಕಂಡರು. ಸಂತಸದ ಸೆಲೆ ಆಂತರ್ಯದಲ್ಲಿ ಉಕ್ಕಿ ಹರಿಯಿತು. ಆಗಿಂದಾಗಲೇ ಲೇಖಕ ಧನ್‌ಗೋಪಾಲ್ ಅವರನ್ನು ಕಾಣಬೇಕೆಂಬ ಹಂಬಲ ತೀವ್ರವಾಯಿತು. ಅದೃಷ್ಟವಷಾತ್ ಧನ್‌ಗೋಪಾಲ್ ಆಗ ಜಿನಿವಾ ಪಟ್ಟಣದಲ್ಲೇ ಇದ್ದರು. ಸಾಹಿತಿಗಳಿಬ್ಬರ ಅಪೂರ್ವ ಸಮಾಗಮ ಸೋದರಿಯ ನೆರವಿನಿಂದ ನೆರವೇರಿತು. ಮುಂದೆ ಇದೇ ಅಪರೂಪದ ಪರಿಚಯ ಶ್ರೀರಾಮಕೃಷ್ಣ ಮಠದ ಹಿರಿಯ ಯತಿವರ್ಯರಾದ ಸ್ವಾಮಿ ಶಿವಾನಂದರ ಸಂಪರ್ಕದ ಪುಣ್ಯಾವಕಾಶಕ್ಕೆ ಕಾರಣವಾಯಿತು. ಈ ವಿಶೇಷ ಪ್ರಸಂಗವೇ ಮೂಲ ಕಾರಣವಾಗಿ ರೋಮಾ ರೋಲಾ ಅವರಿಂದ 'ಲೈಫ್ ಆಫ್ ರಾಮಕೃಷ್ಣ' ಎಂಬ ಶ್ರೇಷ್ಠ ಕೃತಿ ರಚಿತವಾಯಿತು. ಆನಂತರ ಕೆಲವೇ ಸಮಯದಲ್ಲಿ ವಿಶ್ವದ ಎಲ್ಲ ಮುಖ್ಯಭಾಷೆಗಳಿಗೂ ಅದು ಅನುವಾದಿತವಾಗಿ, ಶ್ರೀರಾಮಕೃಷ್ಣರ ಮಹಿಮಾನ್ವಿತ ವ್ಯಕ್ತಿತ್ವದ ಪ್ರಭಾವಲಯ ಜಗತ್ತಿನಾದ್ಯಂತ ಬೆಳಗುವಂತಾಯಿತು. ಇದು ಧನ್‌ಗೋಪಾಲ್ ಅವರ ಕೃತಿ ನಿಮಿತ್ತದಿಂದ ಮಾನವಲೋಕಕ್ಕೆ ಪ್ರಾಪ್ತವಾದ ಉತ್ಕೃಷ್ಟಕೊಡುಗೆ. ರೋಮಾ ರೋಲಾ ತಮ್ಮಿಂದ ಇಂತಹ ಮಹತ್ಕೃತಿ ರಚಿತವಾಗಲು ಕಾರಣರಾದ ಧನ್‌ಗೋಪಾಲ್ ಅವರಿಗೆ ಅತ್ಯಂತ ಹೃತ್ಪೂರ್ವಕ ಕೃತಜ್ಞತೆಯ ವಂದನೆಯನ್ನು ಸಲ್ಲಿಸುತ್ತಾ ಹೀಗೆ ನುಡಿದಿದ್ದಾರೆ: ''ಹಲವಾರು ಮತಧರ್ಮದ ನೂರಾರು ನದಿಗಳನ್ನು ತಮ್ಮಲ್ಲಿ ಸಂಗಮಿಸಿಕೊಂಡು ಮಹಾನದಿಯಾಗಿ, ವಿಶ್ವಧರ್ಮದ ಮಹಾಸಾಗರದೆಡೆಗೆ ಸಾಗುತ್ತಿರುವ ಉಜ್ವಲ ಜೀವನದ ಶ್ರೀರಾಮಕೃಷ್ಣರು ನನ್ನ ಹೃದಯದ ಅತ್ಯಂತ ಸಮೀಪದಲ್ಲಿರುವ ಮಹಾಪುರುಷರು. ಒಂದೇ ಸೂರ್ಯನ ಪ್ರಕಾಶ ಸಹಸ್ರಾರು ಹಿಮಬಿಂದುಗಳಲ್ಲಿ ಪ್ರತಿಫಲಿಸುತ್ತದೆ ಎಂಬ ಮಹಾಸತ್ಯವನ್ನು ಅವರು ತಮ್ಮ ಸ್ವಾನುಭವದಿಂದ ಸಾರಿದವರು. ಮಾನವ ಜನಾಂಗದ ಎರಡು ಸಾವಿರ ವರ್ಷಗಳ ಧಾರ್ಮಿಕ ಜೀವನದ ಕೋಟಿಕೋಟಿ ಮಾನವರ ಸತ್ಯದರ್ಶನದ ಸಾರಸ್ವರೂಪ ಈ ಮಹಾಪುರುಷರ ಬೋಧೆ. ಅವರ ಸರ್ವಧರ್ಮ ಸಮನ್ವಯದ ಅಮೃತ ತೀರ್ಥವನ್ನು ಬಾಯಾರಿದವರಿಗೆ ನೀಡಲೆಂದೇ ಈ ಕೃತಿಯನ್ನು ರಚಿಸಿದ್ದೇನೆ. ಇಂತಹ ಮಹಾಮಾನವರ ಹಿರಿಮೆಯನ್ನು ಅರಿತು, ಎರಡು ವರ್ಷಗಳ ನಿರಂತರ ಪರಿಶ್ರಮದಿಂದ ನನ್ನ ಗ್ರಂಥ ರಚಿತವಾಯಿತು. ಧನ್ ಗೋಪಾಲ್ ಅವರಿಗೆ ಕೃತಜ್ಞತೆಯ ಹಾರ್ದಿಕ ವಂದನೆ'' ಎಂದಿದ್ದಾರೆ.

೧೯೨೨ ರಿಂದ ೩೪ರ ವರೆಗೆ ಹನ್ನೆರಡು ವರ್ಷಗಳ ಕಾಲ ಪರಮಗುರು ಸ್ವಾಮಿ ಶಿವಾನಂದರ ದೈವೀಪ್ರೇಮ, ಯೌಗಿಕ ಮಾರ್ಗದರ್ಶನ ಅಂತರ್ಮುಖ ಆತ್ಮಾವಲೋಕನ ಧನ್‌ಗೋಪಾಲ್ ಅವರ ಮೇಲೆ ಅತ್ಯಂತ ಗಾಢವಾದ ಪರಿಣಾಮವನ್ನು ಬೀರಿತು. ಮೊದಲಿನಿಂದಲೂ ತಾನು ಯಾರು? ಎಲ್ಲಿಯವನು? ಎಂಬ ಆತ್ಮಬೋಧನೆಯ ತುಡಿತ ತೀವ್ರವಾಗಿತ್ತು. ೧೯೩೪ರಲ್ಲಿ ಗುರುವಿನ ನಿರ್ಯಾಣದ ನಂತರ ಅದು ಮತ್ತಷ್ಟು ತೀವ್ರವಾಯಿತು. ಅವರ ಆಂತರ್ಯದಲ್ಲಿ ಒಬ್ಬ ಯತಿ ಇದ್ದ. ಪ್ರಸಾದ ರೂಪದಲ್ಲಿ ಅವರು ಗುರುವಿನಿಂದ ಪಡೆದಿದ್ದ ಕಾವಿವಸ್ತ್ರ ಮತ್ತು ಗುರುವಿನ ಪದಚಿಹ್ನೆ ಅವರೊಂದಿಗೆ ಸದಾ ಇರುತ್ತಿತ್ತು. ಪರಮಹಂಸರ ಪುಣ್ಯಧಾಮದಲ್ಲಿ ವಿಲೀನತೆಯನ್ನು ಪಡೆಯಲೇಬೇಕೆಂಬ ಭಾವತಪ್ತ ನಿರ್ಧಾರ ಧನ್‌ಗೋಪಾಲ್ ಅವರಲ್ಲಿ ಸುನಾಮಿಯಂತೆ ಉಕ್ಕಿ ಹರಿದು, ೪೭ನೇ ವಯಸ್ಸಿನಲ್ಲಿ ತಮ್ಮ ಜೀವನವನ್ನು ತಾವೇ ಅಂತ್ಯಗೊಳಿಸಿಕೊಂಡು ೧೯೩೬ರಲ್ಲಿ ಈ ಗಂಭೀರ ಘಟನೆಗೆ ಕಾರಣವಾಯಿತು. ''ಗುರುಪಾದದಲ್ಲಿ ಪೂರ್ಣ ಶರಣಾಗಿದ್ದೇನೆ. ಮುಕ್ತನಾಗುವಂತೆ ಹರಸಿ'' ಎಂದು ಸ್ವಾಮಿ ಅಖಂಡಾನಂದರಿಗೆ ಕೊನೆಯ ಪತ್ರ ಬರೆದಿದ್ದಾರೆ. ಧನ್‌ಗೋಪಾಲ್ ಅವರ ಪತ್ನಿ, ಅವರ ಪುತ್ರ, ಅವರ ಆಪ್ತಸ್ನೇಹಿತ ಮತ್ತು ಮಿಸ್ ಮ್ಯಾಕ್ಲಿಯಾಡ್ ಹಾಗೂ ಸ್ವಾಮಿ ನಿಖಿಲಾನಂದ ಇವರೆಲ್ಲ ನಿಜಸ್ಥಿತಿ ತಿಳಿದೇ ಕಂಬನಿ ಹರಸಿದ್ದಾರೆ. 'ವಚನವೇದ'ದಲ್ಲಿ ಪರಮಹಂಸರು ಯುವಭಕ್ತನೊಬ್ಬ ಹೀಗೆ ಅಂತ್ಯ ಹೊಂದಿದಾಗ ನಿಜಸ್ವರೂಪ, ನಿಜಧಾಮದ ಜ್ಞಾನ ಜಾಗೃತವಾದವರ ಆತ್ಮಹತ್ಯೆ, ಆತ್ಮಹತ್ಯೆಯಲ್ಲ ಆತ್ಮಾರ್ಪಣ ಎನ್ನುತ್ತಾರೆ. ಧನ್

ಗೋಪಾಲ್ ಅವರಲ್ಲಿರುವ ಧನ್ಯಗೋಪಾಲ್‌ಗೆ ನಮ್ಮ ನಮನ. ಗೌರವಾನ್ವಿತ ಧನ್‌ಗೋಪಾಲ್ ಅವರು ತಮ್ಮ ನಲುವತ್ತೇಳನೆಯ ವಯಸ್ಸಿನಲ್ಲಿಯೇ ದಿವಂಗತರಾದಾಗ ಅವರ ಆಪ್ತರು ನುಡಿದ ಭಾವತಪ್ತ ನುಡಿ, ಮನಮಿಡಿವ ನುಡಿ ಹೀಗಿವೆ:

೧) **ಸ್ವಾಮಿ ನಿಖಿಲಾನಂದ**, ರಾಮಕೃಷ್ಣ ವೇದಾಂತ ಸೆಂಟರ್ ನ್ಯೂಯಾರ್ಕ್:

''ನನ್ನ ಆಪ್ತಮಿತ್ರ ಧನ್‌ಗೋಪಾಲ್ ತಮ್ಮ ಧ್ಯಾನದರ್ಶನದಲ್ಲಿ ತಮ್ಮ ಗುರುಧಾಮದಿಂದ ದಿವ್ಯ ಸಂದೇಶವನ್ನು ಪಡೆದಿರಬಹುದು. ಅದರಿಂದಾಗಿಯೇ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಶ್ರೀರಾಮಕೃಷ್ಣರು ಹೇಳುತ್ತಿದ್ದರು 'ಎರಕ ಹಾಕಿದ ಅಚ್ಚಿನಲ್ಲಿರುವ ವಿಗ್ರಹವನ್ನು ತೆಗೆದ ಮೇಲೆ, ಎರಕದ ಅಚ್ಚನ್ನು ಇರಿಸಬೇಕಾಗಿಲ್ಲ.' ಬಹುಶಃ ಈ ಘಟನೆಯೂ ಅದೇ ರೀತಿಯಿದೆ.''

೨) ಧನ್‌ಗೋಪಾಲ್ ಅವರ ಪತ್ನಿ **'ಪ್ಯಾಟಿ'**:

''ನನ್ನ ಪತಿ ಯಾರ ಸಾನ್ನಿಧ್ಯಕ್ಕಾಗಿ ಹಂಬಲಿಸಿದ್ದರೋ ಆ ಗುರುಸಾನ್ನಿಧ್ಯವನ್ನು ತಮ್ಮ ಸ್ವಸಂಕಲ್ಪದಿಂದ ಪಡೆದುಕೊಂಡಿದ್ದಾರೆ. ಆದರೆ ಅವರು ಹಾಗೆ ಆ ದಿವ್ಯಲೋಕವನ್ನು ಸೇರಿರುವುದು ತಮ್ಮ ಮನಸ್ಸಿನ ದುರ್ಬಲ ಕ್ಷಣದಲ್ಲಿ ಅಲ್ಲ, ದೈವಿಕವಾದ ಸಮರ್ಪಣಾ ಭಾವದ ಕ್ಷಣದಲ್ಲಿ.''

೩) ಧನ್‌ಗೋಪಾಲ್ ಅವರ ಪುತ್ರ **ಇಮ್ಮಡಿ ಧನ್ ಗೋಪಾಲ್**:

''ನನ್ನ ತಂದೆಯವರಲ್ಲಿ ಮೊದಲಿನಿಂದಲೂ ತಾನು ಯಾರು? ಎಲ್ಲಿಗೆ ಸೇರಿದವನು? – ಎಂಬ ಆತ್ಮಶೋಧನೆ ಗುಪ್ತವಾಗಿ ಅವರ ಮನಸ್ಸಿನಾಳದಲ್ಲಿ ನಡೆದೇ ಇತ್ತು. ಶ್ರೀರಾಮಕೃಷ್ಣ ಮಠದ ಯತಿವರ್ಯರ ಸಂಪರ್ಕದಿಂದ ಅದು ಇನ್ನಷ್ಟು ಆಳವಾಯಿತು. ಸ್ವಾಮಿ ಅಖಂಡಾನಂದರಿಂದ ಕೃಪಾಶೀರ್ವಾದವಾಗಿ ಬಂದ ಕಾವಿ ವಸ್ತ್ರ ಮತ್ತು ಅವರು ಬರೆದ ಪತ್ರ ಮತ್ತಷ್ಟು ಅವರ ಶೋಧನೆಗೆ ಸ್ಪಷ್ಟತೆ ನೀಡಿರಬೇಕು. ಅದೇ ಈ ದಿಶೆಯಲ್ಲಿ ಅವರನ್ನು ನಡೆಸಿರಬೇಕು. ಅವರು ಬರೆದ ಕೃತಿ 'ದಿ ಫೇಸ್ ಆಫ್ ಸೈಲೆನ್ಸ್' ಓದುಗರ ಆತ್ಮಸತ್ವವನ್ನು ದೀಪ್ತಗೊಳಿಸಲಿ, ವ್ಯಾಪ್ತಗೊಳಿಸಲಿ.''

೪) ಧನ್‌ಗೋಪಾಲ್ ಅವರ ಆಪ್ತಸ್ನೇಹಿತ **ಬ್ರ್ಯೂಸ್ಟರ್**:

''ನನ್ನ ಅತ್ಯಂತ ಆಪ್ತಸ್ನೇಹಿತನಾದ ಧನ್‌ಗೋಪಾಲ್ ಅವರೊಂದಿಗೆ ಇದ್ದಾಗ, ಅವರೊಂದಿಗೆ ಮಾತನಾಡುವಾಗ ಯಾವಾಗಲೂ ನನಗೆ ಆಗುತ್ತಿದ್ದ ಅನುಭವ ಅವರು ಈ ನಮ್ಮ ಸಾಮಾನ್ಯ ನೆಲೆಗೆ ಸೇರಿದವರಲ್ಲ, ಬೇರೊಂದು ವಿಶೇಷವಾದ ದೈವೀ ನೆಲೆಯಿಂದ ಬಂದ ದೇವಮಾನವನೆಂದೇ ಅನಿಸುತ್ತಿತ್ತು. ಅವರು ಈ ರೀತಿ ಕಣ್ಮರೆಯಾದದ್ದು ಕೇಳಿ ನನ್ನ ಈ ಆಲೋಚನೆ ಇನ್ನಷ್ಟು ದೃಢವಾಯಿತು.

೫) **ಮಿಸ್ ಜೋಸೆಫಿನ್ ಮ್ಯಾಕ್ಲಿಯಾಡ್:**

''ನಮ್ಮ ಧನ್‌ಗೋಪಾಲ್ ಯಾವ ಗುರುಹಿರಿಯರಿಗಾಗಿ ಬಹುವಾಗಿ ಹಂಬಲಿಸಿದ್ದಾರೋ ಅವರಲ್ಲಿಗೇ ಹೋಗಿದ್ದಾರೆ. ಅವರ ಗುರುಭಕ್ತಿಯೇ ಅವರನ್ನು ಪವಿತ್ರಧಾಮಕ್ಕೆ ಸೆಳೆದಿದೆ.''

೬) ಸ್ವಾಮಿ ಅಖಂಡಾನಂದರಿಗೆ ಧನ್‌ಗೋಪಾಲ್ ಅವರು ಬರೆದ ಅಂತಿಮ ಪತ್ರ:

''ಪರಮಪೂಜ್ಯ ಸ್ವಾಮೀಜಿ ತಮ್ಮ ಶ್ರೀಚರಣದಲ್ಲಿ ನನ್ನ ಕೋಟಿ ಕೋಟಿ ಪ್ರಣಾಮ, ತಮ್ಮ ಪತ್ರ ಹಾಗೂ ಪ್ರಸಾದ ರೂಪದಲ್ಲಿ, ಆಶೀರ್ವಾದಪೂರ್ವಕವಾಗಿ ತಾವು ನನಗೆ ಕಳಿಸಿರುವ ಕಾವಿ ವಸ್ತ್ರ ನನ್ನ ಕೈ ಸೇರಿದೆ. ನಾನು ಧನ್ಯನಾದೆ. ಪರಮಪೂಜ್ಯ ಗುರು ಸ್ವಾಮಿ ಶಿವಾನಂದ ಬಾಬಾ ಅವರೂ ನನಗೆ ಅವರ ಪವಿತ್ರ ಪಾದ ಚಿಹ್ನೆ ಮತ್ತು ಕಾವಿ ವಸ್ತ್ರವನ್ನು ಆಶೀರ್ವಾದಪೂರ್ವಕವಾಗಿ ಕಳಿಸಿ ನನ್ನನ್ನು ಹರಸಿದ್ದರು. ತಮ್ಮ ಪತ್ರವನ್ನು ಓದುತ್ತ ಓದುತ್ತ ನನ್ನ ಮನಸ್ಸು ಅತ್ಯಂತ ಉನ್ನತವಾದ ಧ್ಯಾನದ ನೆಲೆಯನ್ನೇರಿತು. ಪತ್ರದಲ್ಲಿ ತಾವು ಕೇಳಿದ್ದೀರಿ, 'ನೀನು, ನಿನ್ನ ಗುರುವಿನಂತೆ ಆಗಬೇಕೆಂದಿದ್ದೀಯಾ ಅಥವಾ ಅವರ ಶ್ರೇಷ್ಠ ಪುತ್ರನಾಗಬೇಕೆಂದಿದ್ದೀಯಾ'. ಅದಕ್ಕೆ ನಾನೇನು ಉತ್ತರಿಸಲಿ? ಈಗ ನನಗೆ ಪೂರ್ಣ ಜ್ಞಾನೋದಯವಾಗಿದೆ. ನಾನು ನನ್ನ ಗುರುವಿನಂತೆ ಸಾಧುವಾಗಬೇಕೆಂದು ಆಶಿಸುತ್ತೇನೆ. ಈ ಭಾವತರಂಗ ಹಲವಾರು ತಿಂಗಳುಗಳಿಂದ ನನ್ನ ಅಂತರಂಗದಲ್ಲಿ ಮೇಲೇಳುತ್ತಲೇ ಇದೆ. ನನ್ನ ಗುರುವಿನ ಪ್ರೇಮ ನನ್ನ ಮೇಲೆ ತಾಯ ಮಮತೆಯೆ? ತಂದೆಯ ಪ್ರೀತಿಯೆ? ಅದು ಎರಡನ್ನೂ ಮೀರಿದ ದೈವಿಕ ಪ್ರೇಮ!

''೧೯೧೦ರಲ್ಲಿ ಅಮೆರಿಕಾಗೆ ಒಬ್ಬ ಕೂಲಿಕಾರನಾಗಿ ಬಂದೆ. ಹೊರಗಿನ ಮತ್ತು ಆಂತರ್ಯದ ಬದುಕನ್ನು ಹದವಾಗಿಸಿಕೊಂಡು ಬದುಕಲು ತುಂಬ ಸೆಣಸಾಡಿದೆ. ಇಂಗ್ಲಿಷ್ ಸಾಹಿತ್ಯಲೋಕ ನನ್ನ ಸಾಹಿತ್ಯದ ಬರಹಕ್ಕೆ ಮಾನ್ಯತೆ ನೀಡಿತು. ಶ್ರೀಶಂಕರರ ಬ್ರಹ್ಮಸೂತ್ರಭಾಷ್ಯದ ಬೆಳಕು ನೆಮ್ಮದಿ ನೀಡಿತು. ೧೯೧೪ರಲ್ಲಿ ಹಿರಿಯ ಭಕ್ತರಾದ ಮಾನ್ಯ ಮ್ಯಾಕ್ಲಿಯಾಡ್ ಪರಿಚಯವಾಯಿತು. ಅವರು ನನ್ನನ್ನು ಭಾರತಕ್ಕೆ ೧೯೨೨ರಲ್ಲಿ ಶ್ರೀರಾಮಕೃಷ್ಣರ ಮತ್ತು ಅವರ ಯತಿಶ್ರೇಷ್ಠರ ಸಂಪರ್ಕ ಸಾನ್ನಿಧ್ಯಕ್ಕೆ ಕರೆತಂದರು. ಅಲ್ಲಿಯೇ ತಮ್ಮನ್ನು ನಾನು ಮೊದಲು ಕಂಡಿದ್ದು. ನನ್ನ ಗುರುವಿನಲ್ಲಿ ನಾನು ಶ್ರೀರಾಮಕೃಷ್ಣರನ್ನೇ ಕಂಡೆ ! ನನ್ನ ಗುರುವೇ ನನಗೆ ಸಾಕ್ಷಾತ್ ''ಶಿವ''. ಅವರ ಸನ್ನಿಧಿಯೇ ನನಗೆ ಆನಂದ ಸನ್ನಿಧಿ. ಆ ಪವಿತ್ರ ಸನ್ನಿಧಿಯಲ್ಲಿ ಲೀನವಾಗಲು ಹೃದಯ ತೀವ್ರವಾಗಿ ಹಂಬಲಿಸಿದೆ. ಅದು ಸಿದ್ಧಿಸಲೆಂದು ತಾವು ಕೃಪೆ ಮಾಡಿ ಹರಸಿ ! ಶ್ರೀ ಗುರುವಿನಲ್ಲಿ ಪೂರ್ಣ ಶರಣಾಗಿದ್ದೇನೆ, ಸಾನ್ನಿಧ್ಯ ಸಿದ್ಧಿಗಾಗಿ ತವಕಿಸಿದ್ದೇನೆ. ಹರಸಿ ಪ್ರಭು, ಹರಸಿ ! ತಮ್ಮ ಶ್ರೀಚರಣದಲ್ಲಿ ಕೋಟಿ ಕೋಟಿ ಪ್ರಣಾಮಗಳು.

ನಿಮ್ಮ ಚರಣಸೇವಕ

ಧನ್‌ಗೋಪಾಲ್.''